# ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**: 07/2024

ಡಬ್ಲ್ಯೂ ಡಬ್ಲ್ಯೂ- 1

**ದಿನಾಂಕ 15.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಸಂಖ್ಯೆ 2 ರವರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿರುತ್ತೇನೆ. 2 ನೇ ಪಕ್ಷಗಾರ ಸಂಸ್ಥೆ ಮೊದಲು Reid and Taylor division of S–Kumars Syn Fabs ಎಂದು ಇತ್ತು ಎಂದರೆ ಸರಿ. ನಾನು ಸದರಿ ಸಂಸ್ಥೆಯಲ್ಲಿ ಅಪ್ರೆಂಟಿಸ್ ಆಗಿ ನೇಮಕಗೊಂಡಿದ್ದೆ ಎಂದರೆ ಸರಿ. ಅಲ್ಲಿ ಸೇರುವುದಕ್ಕೆ ಮುಂಚೆ ನಾನು ಬೇರೆ ಎಲ್ಲೂ ಕೆಲಸ ಮಾಡಿರಲಿಲ್ಲ. 2 ನೇ ಪಕ್ಷಗಾರ ಸಂಖ್ಯೆ 1 ರವರ ಸಂಸ್ಥೆಯನ್ನು ಮೊದಲು ನಿತಿನ್‌ರವರ ತಂದೆ ಶಂಭುಕುಮಾರ್ ಕಾಸ್ಲಿವಾಲಾರವರು ನಡೆಸುತ್ತಿದ್ದರು. ತದನಂತರ ನಿತಿನ್ ಕಾಸ್ಲಿವಾಲಾರವರು ಸದರಿ ಸಂಸ್ಥೆಯನ್ನು ನಡೆಸುತ್ತಿದ್ದರು ಎಂದರೆ ಸರಿ. ಸದರಿ ಸಂಸ್ಥೆಯಲ್ಲಿ ಕೆಲಸ ಮಾಡಿದ್ದ ಕೆಲಸಗಾರರು Reid and Taylor Employees Association ಎಂಬ ಸಂಘವನ್ನು ಕಟ್ಟಿಕೊಂಡಿದ್ದರು ಎಂದರೆ ಸರಿ. ಸದರಿ ಯೂನಿಯನ್‌ನಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಕಾರ್ಮಿಕರು ಸದಸ್ಯರಾಗಿದ್ದರು ಎಂದರೆ ಸರಿ.

ನಾನು ಸದರಿ ಸಂಘದ ಸದಸ್ಯನಾಗಿದ್ದೆ. ನೌಕರರಿಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಸದರಿ ಯೂನಿಯನ್‌ರವರು ಆಡಳಿತ ವರ್ಗದವರ ಜೊತೆ ಮಾತನಾಡಿ ನಿವಾರಣೆ ಮಾಡುತ್ತಿದ್ದರು ಎಂದರೆ ಸರಿ. ಅದೇ ರೀತಿ ಮೂರು ವರ್ಷಕ್ಕೊಮ್ಮೆ ಬೇಡಿಕೆ ಪಟ್ಟಿಯನ್ನು ಕೊಟ್ಟು ಅದರ ತೀರ್ಮಾನ ಮಾಡಿಕೊಂಡು ಒಪ್ಪಂದ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ಒಪ್ಪಂದದ ಸವಲತ್ತುಗಳು ನನಗೂ ಸಹ ಬರುತ್ತಿತ್ತು ಎಂದರೆ ಸರಿ. ಕಾರ್ಮಿಕ ಸಂಘದವರು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದರೋ ಅದನ್ನು ನಾನು ಯಾವಾಗಲೂ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಯಾವಾವ ವಿಚಾರಗಳಲ್ಲಿ ನಾನು ಒಪ್ಪಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿ ಗೇಟ್ ಮೀಟಿಂಗ್ ಆಗಿ ಸರ್ವಾನುಮತದ

ತೀರ್ಮಾನವಾದಾಗ ಮಾತ್ರ ಒಪ್ಪಿಕೊಳ್ಳುತ್ತಿದ್ದೆ ಎನ್ನುತ್ತಾರೆ. ಗೇಟ್ ಮೀಟಿಂಗ್ ನಲ್ಲಿ ಯಾರಾರು ಆ ದಿನ ಕೆಲಸಕ್ಕೆ ಬಂದಿರುತ್ತಿದ್ದರೋ ಅವರೆಲ್ಲ ಹಾಜರಿರುತ್ತಾರೆ ಎಂದರೆ ಸರಿ.

ನಾನು 2 ನೇ ಪಕ್ಷಗಾರ ಸಂಸ್ಥೆ 1 ರವರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಕಡೆ ಕೆಲವು ಬಾರಿ ಮುಷ್ಕರಗಳು ನಡೆಯುತ್ತಿದ್ದವು ಎಂದರೆ ಸರಿ. ಅದಾದ ನಂತರ ಆಡಳಿತ ವರ್ಗ ಮತ್ತು ಯೂನಿಯನ್ ರವರು ಮಾತನಾಡಿಕೊಂಡು ಪುನಃ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ನಾನು ಆ ರೀತಿ ಕೆಲಸಕ್ಕೆ ಹೋಗುತ್ತಿದ್ದ ಸಂದರ್ಭದಲ್ಲಿ ಒಳ್ಳೆ ನಡತೆ ವಾಗ್ದಾನ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿ. 2018 ಅಥವಾ 2019 ರಲ್ಲಿ 2 ನೇ ಪಕ್ಷಗಾರ ಸಂಖ್ಯೆ 1 ರವರ ಸಂಸ್ಥೆಯು ಎನ್.ಸಿ.ಎಲ್.ಟಿ.ಗೆ ರೆಫರ ಆಗಿತ್ತು ಎಂದರೆ ಸರಿ. ಎನ್.ಸಿ.ಎಲ್.ಟಿ.ರವರು ಸಂಸ್ಥೆಯನ್ನು ಉಳಿಸುವ ಉದ್ದೇಶದಿಂದ Resolution Profession ರನ್ನು ನೇಮಕ ಮಾಡಿದ್ದರು ಎಂದರೆ ಸರಿ. ಎನ್.ಸಿ.ಎಲ್.ಟಿ. ಮುಂದೆ ಸದರಿ ವಿವಾದ ಇತ್ಯರ್ಥದಲ್ಲಿದ್ದಾಗ ನಮ್ಮ ಯೂನಿಯುನರವರು ಕೂಡ ಅದರಲ್ಲಿ ಭಾಗವಹಿಸಿದ್ದರು ಎಂದರೆ ಸರಿ. ಸಂಸ್ಥೆ ರಿವೈವ್ ಆಗದೇ ಇದ್ದ ಕಾರಣ ಎನ್.ಸಿ.ಎಲ್.ಟಿ. ರವರು ಲಿಕ್ವಿಡೇಶನ್‌ಗೆ ಆದೇಶ ಮಾಡಿದ್ದರು ಎಂದರೆ ಸರಿ.

ಎನ್.ಸಿ.ಎಲ್.ಟಿ. ರವರು ರವಿಶಂಕರ ದೇವರಕೊಂಡರವರನ್ನು Official Liquidator ಆಗಿ ನೇಮಕ ಮಾಡಿದ್ದರು ಎಂದರೆ ಸರಿ. Official Liquidator ರವರು ಸಂಸ್ಥೆಯಲ್ಲಿದ್ದ ಎಲ್ಲ ಕಾರ್ಮಿಕರನ್ನು ಹಾಗೂ ಆಡಳಿತ ವರ್ಗದವರನ್ನು ದಿನಾಂಕ 14.05.2020 ರಂದು ವಿಮುಕ್ತಿಗೊಳಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ನನ್ನನ್ನು ಸಹ ವಿಮುಕ್ತಿಗೊಳಿಸಿದ್ದರು ಎಂದರೆ ಸರಿ. ಈ ಪ್ರಕರಣದಲ್ಲಿ ನನ್ನ ಜೊತೆ ಇನ್ನೂ 12 ಜನ ಕೆಲಸಗಾರರು ಇರುತ್ತಾರೆ ಎಂದರೆ ಸರಿ. ಅವರುಗಳು ಎಂದರೆ ಚಿಕ್ಕ ಮಹದೇವ, ದೇಶೀ ಗೌಡ, ಮಹದೇವಪ್ಪ, ಮಹದೇವು, ನಾಗರಾಜು, ನವೀನ ಕುಮಾರ್, ಜಗದೀಶ, ಕೋಮಲಾ, ಸಿದ್ದಪ್ಪ ಇನ್ನೂ ಇತರೆಯವರು ಇರುತ್ತಾರೆ. ಸದರಿಯವರು ನನಗೆ ಈ ಪ್ರಕರಣದಲ್ಲಿ ಅವರ ಪರವಾಗಿ ಸಾಕ್ಷಿ ನುಡಿಯುವಂತೆ ಅಧಿಕಾರ ಪತ್ರ ಕೊಟ್ಟಿಲ್ಲ. ನಾನು ನನ್ನ ಪರವಾಗಿ ಮಾತ್ರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣವು ನನ್ನನ್ನು ದಿನಾಂಕ

14.05.2020 ರಂದು ಕೆಲಸದಿಂದ ಬಿಡುಗಡೆ ಗೊಳಿಸಿದ್ದು ನ್ಯಾಯಸಮ್ಮತವೇ ಎಂಬುದನ್ನು ತೀರ್ಮಾನಿಸುವ ಸಲುವಾಗಿ ಇಲ್ಲಿಗೆ ಬಂದಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಶ್ರೀ ಜೆ.ಪಿ.ರವರು ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**